**2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-139 /2021**

ಪಿ.ಡಬ್ಲ್ಯೂಃ- 1
ಸಿ.ಡಬ್ಲ್ಯೂಃ- 3

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಜಯಣ್ಣ |
| ತಂದೆಯ ಹೆಸರುಃ | : | ಕುಂಟೇಗೌಡ |
| ವಯಸ್ಸುಃ | : | 52 ವರ್ಷ |
| ವೃತ್ತಿಃ | : | ವ್ಯವಸಾಯ |
| ವಾಸಃ | : | ಜಮ್ಮನಹಳ್ಳಿ ಗ್ರಾಮ |

**ದಿನಾಂಕಃ 09-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ಮಂಜುನಾಥ ಗೊತ್ತು. ಚಾಸಾ-1 ಶ್ರೀಮತಿ ರೂಪ ಗೊತ್ತು. ಚಾಸಾ-2 ಮೋಹನ ಗೊತ್ತು. ಚಾಸಾ-4 ಹಾಗೂ 5 ರವರೂ ಸಹ ನನಗೆ ಗೊತ್ತು. ಚಾಸಾ-1 ರೂಪರವರ ಗಂಡನ ಹೆಸರು ತಮ್ಮಣ್ಣಿ. ತಮ್ಮಣ್ಣಿರವರು ಈಗ ಬದುಕಿಲ್ಲ. ತಮ್ಮಣ್ಣಿರವರು ಹೇಗೆ ಮೃತಪಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ನಮ್ಮ ಗ್ರಾಮದಲ್ಲಿ ಜಮೀನು ಹೊಂದಿದ್ದು ಜೋಳ ಹಾಗೂ ಮೆಣಸಿನಕಾಯಿಯನ್ನು ಬೆಳೆಯುತ್ತೇನೆ. ನನ್ನ ಜಮೀನಿನಲ್ಲಿ ಬೆಳೆದಿದ್ದ ಬೆಳೆಗಳಿಗೆ ಯಾವುದೇ ಕಾಡುಪ್ರಾಣಿಗಳ ಕಾಟ ಇರುವುದಿಲ್ಲ. 4 ವರ್ಷದ ಹಿಂದೆ ತಮ್ಮಣ್ಣಿರವರು ಮೃತಪಟ್ಟಿರುತ್ತಾರೆ. ತಮ್ಮಣ್ಣಿ ಮೃತಪಟ್ಟ ದಿನ ಸಂಜೆ 6 ಗಂಟೆ ಸಮಯದಲ್ಲಿ ನನಗೆ ಫೋನ್ ಮಾಡಿ ಆತ ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ನಮ್ಮ ಗ್ರಾಮದ ಉಮ್ಮರ್ ರವರು ನನಗೆ ಫೋನ್ ಮಾಡಿ ತಮ್ಮಣ್ಣಿ ಮೃತಪಟ್ಟ

ಬಗ್ಗೆ ತಿಳಿಸಿರುತ್ತಾರೆ. ತಮ್ಮಣ್ಣಿಯವರು ಅವರ ಜಮೀನಿನಲ್ಲಿ ಮೃತಪಟ್ಟರು ಎಂದು ನನಗೆ ತಿಳಿದು ಬಂತು. ಆದರೆ ತಮ್ಮಣ್ಣಿರವರು ಹೇಗೆ ಮೃತಪಟ್ಟರು ಎಂದು ನನಗೆ ತಿಳಿದು ಬರಲಿಲ್ಲ. ತಮ್ಮಣ್ಣಿ ಯಾರ ಜೊತೆ, ಯಾವ ಜಮೀನಿಗೆ ಹೋಗಿದ್ದ ಎಂಬುದೂ ಸಹ ನನಗೆ ತಿಳಿದಿಲ್ಲ. ನಂತರ ಮರುದಿನ ನಾನು ತಮ್ಮಣ್ಣಿರವರ ಮೃತದೇಹವನ್ನು ನೋಡಿರುತ್ತೇನೆ. ತಮ್ಮಣ್ಣಿರವರು ಹೇಗೆ ಮೃತಪಟ್ಟಿರುತ್ತಾರೆಂದು ಮೃತದೇಹ ನೋಡಿದಾಗ ಸಹ ನನಗೆ ತಿಳಿದು ಬರಲಿಲ್ಲ. ತಮ್ಮಣ್ಣಿರವರ ಜೊತೆ ಬೇರೆ ಯಾರಿಗೆ ಗಾಯ ಆಗಿತ್ತು ಎಂದೂ ಸಹ ನನಗೆ ತಿಳಿದಿಲ್ಲ. ಯಾವುದೇ ಗಾಯಾಳುವನ್ನು ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ತಮ್ಮಣ್ಣಿರವರು ಮೃತಪಡಲು ಯಾರು ಕಾರಣ ಎಂದು ನನಗೆ ತಿಳಿದಿಲ್ಲ. ಈಗ ನೋಡುತ್ತಿರುವ ದಾಖಲಾತಿಯಲ್ಲಿರುವ ಸಹಿ ನನ್ನದು. ಸಾಕ್ಷಿದಾರರು ಗುರುತಿಸಿದ ದಾಖಲಾತಿ ಸ್ಥಳ ಮಹಜರ್ ಆಗಿದ್ದು ಸದರಿ ದಾಖಲಾತಿಯನ್ನು ನಿಪಿ-1 ಎಂದು, ನಿಪಿ-1 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಕಲೇಶಪುರ ಪೊಲೀಸರು ಸಕಲೇಶಪುರದ ಪೊಲೀಸ್ ಠಾಣೆಯಲ್ಲಿ ನಿಪಿ-1 ಮಹಜರಿಗೆ ನನ್ನ ಸಹಿ ಪಡೆದಿರುತ್ತಾರೆ. ತಮ್ಮಣ್ಣಿ ಮೃತಪಟ್ಟ 15 ದಿನಗಳ ನಂತರ ಪೊಲೀಸರು ನಿಪಿ-1 ಮಹಜರಿಗೆ ನನ್ನ ಸಹಿ ಪಡೆದರು. ಮಹಜರ್ ಕಾಲದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ.

2. ಈಗ ನೋಡುತ್ತಿರುವ ಬಟ್ಟೆಯ ಚೀಲದ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿದೆ. ಸದರಿ ಚೀಟಿಯ ಮೇಲೆ ನನ್ನ ಸಹಿಯನ್ನು ಯಾವ ಸ್ಥಳದಲ್ಲಿ, ಯಾವ ದಿನಾಂಕದಂದು ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಸೀಲು ಮಾಡಲಾಗಿದ್ದ ಬಟ್ಟೆಯ ಚೀಲವನ್ನು ನ್ಯಾಯಾಲಯದಲ್ಲಿ ತೆರೆಯಲಾಯಿತು. ಸದರಿ

ಬಟ್ಟೆಯ ಚೀಲದಲ್ಲಿ ಪ್ಲಾಸ್ಟಿಕ್ ಡಬ್ಬಿಯಲ್ಲಿದ್ದ ಮಣ್ಣನ್ನು ನೋಡಿದ ಸಾಕ್ಷಿದಾರರು ಅದನ್ನು ತಮ್ಮಣ್ಣೆಯ ಹೊಲದಲ್ಲಿ ಪಡೆದಿರಬಹುದು ಎಂದು ನುಡಿದಿರುತ್ತಾರೆ. ಸದರಿ ಮಣ್ಣನ್ನು ಯಾವ ಕಾರಣಕ್ಕಾಗಿ ಪೊಲೀಸರು ವಶಕ್ಕೆ ಪಡೆದರು ಎಂದು ನನಗೆ ತಿಳಿದಿಲ್ಲ. ಈಗ ನೋಡುತ್ತಿರುವ ಮತ್ತೊಂದು ಬಟ್ಟೆಯ ಚೀಲದ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿದೆ. ಸದರಿ ಚೀಟಿಯ ಮೇಲೆ ನನ್ನ ಸಹಿಯನ್ನು ಯಾವ ಸ್ಥಳದಲ್ಲಿ, ಯಾವ ದಿನಾಂಕದಂದು ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಸೀಲು ಮಾಡಲಾಗಿದ್ದ ಬಟ್ಟೆಯ ಚೀಲವನ್ನು ನ್ಯಾಯಾಲಯದಲ್ಲಿ ತೆರೆಯಲಾಯಿತು. ಸದರಿ ಬಟ್ಟೆಯ ಚೀಲದಲ್ಲಿ ಪ್ಲಾಸ್ಟಿಕ್ ಡಬ್ಬಿಯಲ್ಲಿದ್ದ ರಕ್ತ ಮಿಶ್ರಿತ ಮಣ್ಣನ್ನು ನೋಡಿದ ಸಾಕ್ಷಿದಾರರು ಅದನ್ನು ತಮ್ಮಣ್ಣೆಯ ಹೊಲದಲ್ಲಿ ಪಡೆದಿರಬಹುದು ಎಂದು ನುಡಿದಿರುತ್ತಾರೆ. ಸದರಿ ಮಣ್ಣನ್ನು ಯಾವ ಕಾರಣಕ್ಕಾಗಿ ಪೊಲೀಸರು ವಶಕ್ಕೆ ಪಡೆದರು ಎಂದು ನನಗೆ ತಿಳಿದಿಲ್ಲ. ಸೀಲು ಮಾಡಲಾಗಿದ್ದ ಒಂದು ಬಟ್ಟೆಯ ಚೀಲವನ್ನು ತೆರೆಯಲಾಯಿತು. ಅದರಲ್ಲಿದ್ದ ಬಂದೂಕನ್ನು ನೋಡಿದ ಸಾಕ್ಷಿದಾರರು ಅದು ಯಾರಿಗೆ ಸೇರಿದ ಬಂದೂಕು ಎಂದು ತನಗೆ ತಿಳಿದಿಲ್ಲ ಎಂದು ಉತ್ತರಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಹಾಗೂ ಯಾವುದೇ ಹೇಳಿಕೆ ಪಡೆದಿಲ್ಲ. ಈಗ ನೋಡುತ್ತಿರುವ ಫೋಟೋ ಮೃತ ತಮ್ಮಣ್ಣೆಯ ದೇಹದ ಫೋಟೋ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಫೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ಫೋಟೋವಿನಲ್ಲಿ ಮೃತ ತಮ್ಮಣ್ಣೆಯ ತಲೆಗೆ ಬ್ಯಾಂಡೇಜ್ ಕಟ್ಟಿರುವುದು ಕಂಡುಬರುತ್ತದೆ. ಮೃತ ತಮ್ಮಣ್ಣೆಯ ತಲೆಗೆ ಯಾವ ಕಾರಣದಿಂದ ಬ್ಯಾಂಡೇಜ್ ಕಟ್ಟಲಾಗಿತ್ತು ಎಂದು ನನಗೆ ತಿಳಿದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

3. ನನಗೆ ಗ್ರಾಮದಲ್ಲಿ ಇರುವ ಜಮೀನಿನಲ್ಲಿ ಬೆಳೆದ ಬೆಳೆಯನ್ನು ಕಾಡು ಪ್ರಾಣಿಗಳು ಹಾಳು ಮಾಡುತ್ತಿದ್ದುದರಿಂದ ರಾತ್ರಿ ವೇಳೆ ಜಮೀನಿನ ಅಕ್ಕಪಕ್ಕದವರೊಂದಿಗೆ ಸೇರಿ ನಾವು ಕಾವಲು ಕಾಯುತ್ತಿದ್ದೆವು ಎಂದರೆ ಸರಿಯಲ್ಲ. ಮೃತ ತಮ್ಮಣ್ಣ ನನ್ನ ಸಂಬಂಧಿ. ಮೃತ ತಮ್ಮಣ್ಣ ಅವರ ಜಮೀನಿನಲ್ಲಿ ನರ್ಸರಿ ಗಿಡಗಳನ್ನು ಬೆಳೆದಿದ್ದ ಎಂದರೆ ಸರಿ. ತಮ್ಮಣ್ಣ ಆತನ ಬೆಳೆಯನ್ನು ರಕ್ಷಿಸಿಕೊಳ್ಳಲು ಅವನೂ ಸಹ ರಾತ್ರಿ ವೇಳೆ ಪಹರೆ ಮಾಡುತ್ತಿದ್ದನು ಎಂದರೆ ನನಗೆ ತಿಳಿದಿಲ್ಲ. ದಿನಾಂಕಃ 07.02.2018 ರಂದು ನಾನು ತಮ್ಮಣ್ಣ, ಆರೋಪಿ ಮಂಜುನಾಥ ಹಾಗೂ ಚಾಸಾ-2 ಮೋಹನ್ ರವರು ನರ್ಸರಿ ಬಳಿ ಪಹರೆ ಮಾಡಲು ಹೋಗುವುದಾಗಿ ಮಾತನಾಡಿಕೊಂಡಿದ್ದು ಆ ದಿನ ನಾವು ಸಂಜೆ 6.30 ಗಂಟೆ ಸಮಯದಲ್ಲಿ ತಮ್ಮಣ್ಣರವರ ಜಮೀನಿನ ಬಳಿ ಹೋಗಿ ಪಹರೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಆರೋಪಿ ಮಂಜುನಾಥ ಅವರ ಬಳಿ ಇದ್ದ ಬಂದೂಕನ್ನು ಕಾಡುಪ್ರಾಣಿಗಳಿಂದ ರಕ್ಷಿಸಲು ಪಹರೆಗೆ ಹೋಗುವಾಗ ತೆಗೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಆ ದಿನ ನಾನು ಹಾಗೂ ಆರೋಪಿ ಮುಂದೆ ನಡೆದುಕೊಂಡು ಹೋಗುತ್ತಿದ್ದು ನಮ್ಮಿಂದ ಸ್ವಲ್ಪ ದೂರದಲ್ಲಿ ನಮ್ಮ ಹಿಂದೆ ತಮ್ಮಣ್ಣ ಹಾಗೂ ಮೋಹನ್ ರವರು ನಡೆದುಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ದೂರದಲ್ಲಿ ಆನೆ ಕಿರುಚಿದ ಶಬ್ದ ಕೇಳಿ ಬಂದಿದ್ದು ಆಗ ನನ್ನೊಂದಿಗೆ ಇದ್ದ ಆರೋಪಿ ಮಂಜುನಾಥ ಆತನ ಹೆಗಲ ಮೇಲಿರಿಸಿಕೊಂಡಂತಹ ಬಂದೂಕನ್ನು ತೆಗೆದುಕೊಳ್ಳಲು ಹೋಗಿ ಆಕಸ್ಮಿಕವಾಗಿ ಬಂದೂಕಿನ ಟ್ರಿಗರ್ ಒತ್ತಿದ ಕಾರಣ ಬಂದೂಕಿನಿಂದ ಗುಂಡು ಹಾರಿ ನಮ್ಮಗಳ ಹಿಂದೆ ಸ್ವಲ್ಪ ದೂರ ನಡೆದುಕೊಂಡು ಬರುತ್ತಿದ್ದ ತಮ್ಮಣ್ಣ ಹಾಗೂ ಮೋಹನ್ ರವರಿಗೆ ಗುಂಡಿನ ಚರೆಗಳು ತಾಗಿ

ಅವರು ಕುಸಿದು ಬಿದ್ದು ಒದ್ದಾಡುತ್ತಿದ್ದರು ಎಂದರೆ ಸರಿಯಲ್ಲ. ನಾವು ಹತ್ತಿರ ಹೋಗಿ ನೋಡಲಾಗಿ ತಮ್ಮಣ್ಣ ಮೃತಪಟ್ಟಿದ್ದು ಮೋಹನನ ಕಣ್ಣಿಗೆ ಮತ್ತು ತಲೆಗೆ ಗುಂಡಿನ ಚರೆಗಳು ತಗುಲಿದ್ದು ನಾವು ತಕ್ಷಣ ಮೋಹನನ್ನು ಅವರ ಮನೆಯ ಬಳಿ ಕರೆದುಕೊಂಡು ಬಂದು ತಮ್ಮಣ್ಣಿಗೆ ಏಟಾಗಿದ್ದ ವಿಷಯವನ್ನು ಅವರ ಮನೆಯವರಿಗೆ ತಿಳಿಸಿದೆವು ಎಂದರೆ ಸರಿಯಲ್ಲ. ಗಾಯಗೊಂಡಿದ್ದ ಮೋಹನ್ ರವರನ್ನು ಹಾಸನದ ಎನ್ ಡಿ ಆರ್ ಕೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದು ವೈದರು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮಂಜುನಾಥ ಆತನ ಬಳಿ ಇದ್ದ ಬಂದೂಕಿನಿಂದ ಗುಂಡು ಹಾರಿದರೆ ಜೀವ ಹಾನಿಯಾಗುವುದಾಗಿ ತಿಳಿದಿದ್ದು ಆತನ ಹೆಗಲ ಮೇಲಿದ್ದ ಬಂದೂಕನ್ನು ಎಚ್ಚರಿಕೆಯಿಂದ ಜಾಗ್ರತೆವಹಿಸಿ ತೆಗೆದುಕೊಳ್ಳದೆ ನಿರ್ಲಕ್ಷ್ಯತೆ ವಹಿಸಿದ್ದರಿಂದ ಕೃತ್ಯವು ಸಂಭವಿಸಿ ತಮ್ಮಣ್ಣ ಸಾವಿಗೆ ಹಾಗೂ ಮೋಹನ್ ರವರಿಗೆ ತೀವ್ರವಾಗಿ ಗಾಯವಾಗಲು ಕಾರಣ ಆಗಿರುತ್ತದೆ ಎಂದರೆ ಸರಿಯಲ್ಲ. ಘಟನೆಯ ಸಂಬಂಧ ನಾನು ಪೊಲೀಸರಲ್ಲಿ ಈಗ ನನಗೆ ಓದಿ ಹೇಳಲಾದಂತೆ "ನನಗೆ ಗ್ರಾಮದಲ್ಲಿ --------------- ಹೇಳಿಕೆಯನ್ನು ನೀಡಿರುತ್ತೇನೆ" ಎಂದು ನಿಪಿ-3 ರಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ದಿನಾಂಕಃ 08.02.2018 ರಂದು ಪೊಲೀಸರು ಜಮ್ಮನಹಳ್ಳಿ ಗ್ರಾಮದ ಶ್ರೀಮತಿ ರತ್ನಮ್ಮರವರ ಬಾಬ್ತು ಗದ್ದೆ ಜಮೀನಿನ ಬದುವಿನ ಬಳಿ ನಾನು ಹಾಜರಿದ್ದು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ಕೃತ್ಯ ನಡೆದ ಸ್ಥಳವನ್ನು ಪರಿಶೀಲಿಸಿದ್ದು ಸ್ಥಳದಲ್ಲಿ ಯಾವುದೇ ಬಂದೂಕಿನ ಗುಂಡಿನ ಚರೆಗಳು ಪತ್ತೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಕೃತ್ಯ ಸ್ಥಳದಲ್ಲಿ ಬಿದ್ದಿದ್ದ ರಕ್ತ ಮಿಶ್ರಿತ ಮಣ್ಣು ಹಾಗೂ ಸಾದಾ

ಮಣ್ಣನ್ನು ಪ್ರತ್ಯೇಕವಾಗಿ 2 ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಸಂಗ್ರಹಿಸಿ ಬಿಳಿಯ ಬಟ್ಟೆಯ ಚೀಲದಲ್ಲಿ ಇರಿಸಿ ಅವುಗಳನ್ನು H ಎಂಬ ಅಕ್ಷರದಿಂದ ಸೀಲು ಮಾಡಿ ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ತಯಾರಿಸಿದ ಮಹಜರ್ ನಿಪಿ-1 ಆಗಿದ್ದು ನಾನು ಕೃತ್ಯ ನಡೆದ ಸ್ಥಳದಲ್ಲಿ ಹಾಜರಿದ್ದು ಮಹಜರಿಗೆ ನನ್ನ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ನೋಡುತ್ತಿರುವ ಬಂದೂಕು ಘಟನೆ ಕಾಲದಲ್ಲಿ ಆರೋಪಿತ ಹೆಗಲ ಮೇಲೆ ಹೊತ್ತಿದ್ದ ಹಾಗೂ ಅದರಿಂದ ಗುಂಡು ಹಾರಿಸಿದ ಬಂದೂಕು ಆಗಿರುತ್ತದೆ ಎಂದರೆ ಸರಿಯಲ್ಲ. ಸ್ಥಳ ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೂಂಡ ರಕ್ತಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣು ಈಗ ನಾನು ನ್ಯಾಯಾಲಯದ ಮುಂದೆ ನೋಡುತ್ತಿರುವ ಮಣ್ಣು ಆಗಿರುತ್ತದೆ ಎಂದರೆ ಸರಿಯಲ್ಲ. ಘಟನೆಯ ಪ್ರತ್ಯಕ್ಷ ಸಾಕ್ಷಿ ಆಗಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**ಪಾಟಿ ಸವಾಲು ಇರುವುದಿಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.